ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಸರ್ವ ಶಿಕ್ಷಣ ಅಭಿಯಾನ

# ಚಿಣ್ಣರ ಚೇತನ

2011 ಮಾರ್ಚ್ 16–31

ಓ ನನ್ನ ಚೇತನ ಆಗು ನೀ ಅನಿಕೇತನ

# ಶಿಕ್ಷಣ ಹಕ್ಕು ಜಾರಿಗೆ

ಭಾರತ ಸರ್ಕಾರ ಏಪ್ರಿಲ್ 2010ರಿಂದ ಆರರಿಂದ ಹದಿನಾಲ್ಕು ವಯಸ್ಸಿನ ಮಕ್ಕಳ ಉಚಿತ ಶಿಕ್ಷಣವನ್ನು ಮಕ್ಕಳ ಮೂಲಭೂತ ಹಕ್ಕಾಗಿ ಮಾನ್ಯ ಮಾಡಿದೆ. ಇದುವರೆಗೂ ಸಂವಿಧಾನದ ನಿರ್ದೇಶಕ ತತ್ವಗಳಲ್ಲಿದ್ದ ಈ ವಿಷಯ ಇದೀಗ ಸಂವಿಧಾನದ ಮೂರನೇ ಭಾಗದಲ್ಲಿ ಅಡಕಗೊಂಡಿದ್ದು ಮಕ್ಕಳ ಉಚಿತ ಶಿಕ್ಷಣ ಹಕ್ಕಾಗಿ ಮಾರ್ಪಟ್ಟಿದ್ದು ನ್ಯಾಯಾಲಯಗಳ ಮೂಲಕ ಅಸಮರ್ಪಕ ಅನುಷ್ಠಾನವನ್ನು ಪ್ರಶ್ನಿಸಬಹುದಾಗಿದೆ.

ಆರರಿಂದ ಹದಿನಾಲ್ಕು ವಯಸ್ಸಿನ ಮಕ್ಕಳನ್ನು ಶಾಲೆಗೆ ಕರೆತಂದು ಅವರಿಗೆ ಕನಿಷ್ಠ ಎಂಟು ವರ್ಷಗಳ ಶಿಕ್ಷಣ ಒದಗಿಸುವದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಯಾವುದೇ ಮಗುವಿಗೆ ಶಾಲೆಗೆ ಪ್ರವೇಶ ನಿರಾಕರಿಸುವಂತಿಲ್ಲ. ಮಕ್ಕಳಿಗೆ ಪ್ರವೇಶ ಪರೀಕ್ಷೆ ನಡೆಸುವಂತಿಲ್ಲ. ದೇಶದ ಭವಿಷ್ಯವನ್ನು ಸುಧೃಢಗೊಳಿಸಲು ಈ ಕ್ರಮ ಅವಶ್ಯವಾಗಿದೆ.



ಈ ಕಾಯ್ದೆಯನ್ವಯ ಖಾಸಗಿ ಶಾಲೆಗಳಲ್ಲಿ ಸಮಾಜದ ದುರ್ಬಲ ವರ್ಗಗಳ ಮಕ್ಕಳಿಗೆ ಶೇ 25%ರಷ್ಟು ಪ್ರವೇಶ ಮೀಸಲಿದೆ. ಹಾಗೂ ಈ ಮೀಸಲಾತಿಯ ಸೀಟುಗಳನ್ನು ಭರ್ತಿ ಮಾಡುವುದು ಶಾಲೆಗಳಿಗೆ ಕಡ್ಡಾಯವಾಗಿದೆ. ಎಲ್ಲ ಶಾಲೆಗಳೂ ಈ ಕಾಯ್ದೆಯಲ್ಲಿ ಸೂಚಿಸಲಾದ ಸೌಕರ್ಯಗಳನ್ನು ಮೂರು ವರ್ಷದೊಳಗೆ ಮಕ್ಕಳಿಗೆ ಒದಗಿಸಬೇಕಾಗಿದೆ. ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಈ ಕಾಯ್ದೆಯ ಸಮರ್ಪಕ ಅನುಷ್ಠಾನವನ್ನು ಕೈಗೆತ್ತಿಕೊಳ್ಳಲಿದೆ. 'ಚಿಣ್ಣರ ಚೇತನ' ಬಳಗ ಸರ್ಕಾರದ ಈ ಕ್ರಮವನ್ನು ಸ್ವಾಗತಿಸುತ್ತದೆ.

ಮಕ್ಕಳೇ,

ಮಾರ್ಚ್, ಪರೀಕ್ಷೆಯ ತಿಂಗಳು. ಪರೀಕ್ಷೆಯ ನಂತರ ಫಲಿತಾಂಶ ಹಾಗೂ ಆಮೇಲೆ ರಜಾ. ಪರೀಕ್ಷೆಗಾಗಿ ಶ್ರಮಪಟ್ಟು ಓದಲೇಬೇಕು. ಆದರೆ ಕೇವಲ ಪರೀಕ್ಷೆಗಾಗಿ ಮಾತ್ರ ಓದಿ ಮರೆತು ಬಿಡಬೇಡಿ. ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಿ. ರಜೆಯಲ್ಲಿ ಆಟ ಆಡಿ, ಕಥೆ ಪುಸ್ತಕಗಳನ್ನು ಓದಿ, ಬೇರೆ ಬೇರೆ ಮಾಹಿತಿ ತಿಳಿದುಕೊಳ್ಳಿ. ಸಾಧ್ಯವಾದರೆ ಪ್ರವಾಸ ಹೋಗಿಬನ್ನಿ. ಯುಗಾದಿಯ ಶುಭಾಶಯಗಳು.

–ಸಂಪಾದಕರು

# ರೈಲುಗಳ ಲೋಕ

ಯಾರಿಗೆ ತಾನೆ ರೈಲು ಇಷ್ಟವಿಲ್ಲ? ಅದರ ಚುಕುಬುಕು ಸದ್ದಂತೂ ಮಕ್ಕಳಿಗೆ ಅಚ್ಚುಮೆಚ್ಚು. ರೈಲು ಪ್ರಯಾಣವೂ ಅಷ್ಟೆ; ನಿಲ್ದಾಣದ ಗಡಿಬಿಡಿ, ತಿಂಡಿತಿನಿಸು ಮಾರಾಟಗಾರರ ಕೂಗು, ಸೇತುವೆ ಮೇಲೆ, ಸುರಂಗದ ಒಳಗೆ ರೈಲಿನ ಓಟ –ಎಲ್ಲವೂ ವಿಶಿಷ್ಟ.

ರೈಲುಗಳಲ್ಲಿ ಅದೆಷ್ಟೋ ವಿಧಗಳಿವೆ. ಹಿಂದಿನ ಕಾಲದಲ್ಲಿ ರೈಲುಗಳು ಕಲ್ಲಿದ್ದಲನ್ನು ಉರಿಸಿ ನೀರಿನ ಹಬೆಯನ್ನು ಉತ್ಪಾದಿಸಿಕೊಂಡು ಅದರ ಶಕ್ತಿಯಿಂದ ಚಲಿಸುತ್ತಿದ್ದವು. ಹೀಗಾಗಿಯೇ ರೈಲುಗಳಿಗೆ ಉಗಿಬಂಡಿ ಎಂಬ ಹೆಸರು ಬಂದದ್ದು. ನಂತರ, ತಂತ್ರಜ್ಞಾನ ಬೆಳೆದಂತೆ ರೈಲಿನ ಇಂಜಿನ್ನಿನಲ್ಲಿ ಬೇರೆಬೇರೆ ಇಂಧನಗಳ ಬಳಕೆ ಪ್ರಾರಂಭವಾಯಿತು. ವಿಶ್ವದ ಅತಿ ದೊಡ್ಡ ರೈಲ್ವೇ ಜಾಲ ಹೊಂದಿರುವ ಭಾರತದಲ್ಲಿ ಡೀಸಲ್ ಹಾಗೂ ವಿದ್ಯುತ್‌ಚಾಲಿತ ರೈಲುಗಳು ಓಡಾಡುತ್ತಿವೆ.

## ಮೆಟ್ರೋ ರೈಲು

ನಮ್ಮ ಬೆಂಗಳೂರಿನಲ್ಲಿ ಇದೀಗ ಮೆಟ್ರೋ ರೈಲಿನ ಸಂಚಾರಕ್ಕೆ ಸಿದ್ಧತೆ ನಡೆದಿದೆ. ಇವು ವಿದ್ಯುತ್ ಚಾಲಿತ ರೈಲುಗಳು. ಅಡೆತಡೆಯಿಲ್ಲದೆ ಸುರಂಗದೊಳಗೆ ಅಥವಾ ಎತ್ತರದ ಸೇತುವೆಗಳ ಮೇಲೆ ಸಂಚರಿಸುವುದು ಈ ರೈಲುಗಳ ವೈಶಿಷ್ಟ್ಯ. ಈ ರೈಲುಗಳು ನಿರ್ದಿಷ್ಟ ಮಾರ್ಗದಲ್ಲಿ ಕೆಲವೇ ನಿಮಿಷಗಳ ಅಂತರದಲ್ಲಿ ದಿನಪೂರ್ತಿ ಓಡಾಡುತ್ತಲೇ ಇರುತ್ತವೆ. ದೆಹಲಿ ಹಾಗೂ ಕೋಲ್ಕೊತಾ – ಇವು ನಮ್ಮ ದೇಶದಲ್ಲಿ ಮೆಟ್ರೋ ರೈಲು ವ್ಯವಸ್ಥೆ ಹೊಂದಿರುವ ಇನ್ನೆರಡು ನಗರಗಳು.

ಕೋಲ್ಕೊತಾದಲ್ಲಿ ಕಂಡುಬರುವ ಟ್ರಾಮ್‌ಗಳೂ ಒಂದು ಬಗೆಯ ರೈಲುಗಳೇ. ಇವಕ್ಕೆ ಪ್ರತ್ಯೇಕ ಮಾರ್ಗಗಳಿರುವುದಿಲ್ಲ. ಟ್ರಾಮ್ ಮಾರ್ಗಗಳೇನಿದ್ದರೂ ರಸ್ತೆ ಮೇಲೇ ಹಾದು ಹೋಗಿರುತ್ತವೆ. ಬೇರೆಲ್ಲ ವಾಹನಗಳ ಜತೆಗೇ ಸಂಚರಿಸಬೇಕಿರುವುದರಿಂದ ಟ್ರಾಮ್ ಸ್ವಲ್ಪ ನಿಧಾನ. ಮಾನೋರೈಲು ಎಂಬುದು ಒಂದೇ ಕಂಬಿಯ ಹಳಿ ಹೊಂದಿರುವುದು ಇನ್ನೊಂದು ಬಗೆಯ ರೈಲು.

## ಅತಿವೇಗದ ರೈಲುಗಳು

ರಾಜಧಾನಿ ಎಕ್ಸ್‌ಪ್ರೆಸ್, ಶತಾಬ್ದಿ ಎಕ್ಸ್‌ಪ್ರೆಸ್ ಹಾಗೂ ತುರಂತೋ ಎಕ್ಸ್‌ಪ್ರೆಸ್ ರೈಲುಗಳು ನಮ್ಮ ದೇಶದ ಮಟ್ಟಿಗೆ ಅತ್ಯಂತ ವೇಗದ ರೈಲುಗಳು. ಇವುಗಳ ಸರಾಸರಿ ವೇಗ ಗಂಟೆಗೆ ನೂರು ಕಿಲೋಮೀಟರು. ಭೂಪಾಲಕ್ಕೆ ಹೋಗುವ ಶತಾಬ್ದಿ ಎಕ್ಸ್‌ಪ್ರೆಸ್ ರೈಲು ದೆಹಲಿಯಿಂದ ಆಗ್ರಾ ನಡುವೆ ಗಂಟೆಗೆ 161 ಕಿಮೀ ವೇಗದಲ್ಲಿ ಚಲಿಸಿದ್ದು ರಾಷ್ಟ್ರೀಯ ದಾಖಲೆ.

ಪ್ರಪಂಚದಲ್ಲಿ ಇನ್ನೂ ಹೆಚ್ಚು ವೇಗದಲ್ಲಿ ಸಂಚರಿಸುವ ರೈಲುಗಳಿವೆ. ಬುಲೆಟ್ ರೈಲುಗಳೆಂದು ಕರೆಸಿಕೊಳ್ಳುವ ಇವು ಗಂಟೆಗೆ ಇನ್ನೂರು ಕಿಮೀಗಿಂತ ಹೆಚ್ಚು ವೇಗದಲ್ಲಿ ಚಲಿಸುತ್ತವೆ. ಮೈಸೂರಿನಿಂದ ಬೆಂಗಳೂರಿನ ನಡುವೆ ಇಂಥ ರೈಲು ಇದ್ದರೆ ಒಂದು ಗಂಟೆ ಪ್ರಯಾಣ ಸಾಕು.

ಮ್ಯಾಗ್ಲೆವ್ ಅಥವಾ ಮ್ಯಾಗ್ನೆಟಿಕ್ ಲೆವಿಟೇಶನ್ ತಂತ್ರಜ್ಞಾನ ಬಳಸಿ ಸಂಚರಿಸುವ ರೈಲುಗಳೂ ಇವೆ. ಭಾರೀ ಸಂಖ್ಯೆಯ ಅಯಸ್ಕಾಂತಗಳನ್ನು ಬಳಸಿ ಅವುಗಳಿಂದ ಉಂಟಾಗುವ ಅಯಸ್ಕಾಂತೀಯ ತೇಲುವಿಕೆಯಿಂದ ಇವು ಚಲಿಸುತ್ತವೆ. ಇಂಥ ರೈಲುಗಳು ಗಂಟೆಗೆ 500 ಕಿಮೀಗಳಿಗಿಂತ ಹೆಚ್ಚು ವೇಗದಲ್ಲಿ ಚಲಿಸಿದ ದಾಖಲೆಗಳಿವೆ. ಅಬ್ಬಾ, ಎಷ್ಟೆಲ್ಲ ರೈಲುಗಳಿವೆಯಲ್ಲ! ಪರೀಕ್ಷೆಯ ನಂತರ ನೀವೂ ರೈಲಿನಲ್ಲಿ ಪ್ರಯಾಣಿಸಿ ನಿಮ್ಮ ಅನುಭವದ ಬಗೆಗೆ ಪತ್ರ ಬರೆಯುತ್ತೀರಿ ತಾನೆ?




## ನಮ್ಮ ರೈಲುಗಳು

ಭಾರತೀಯ ರೈಲ್ವೆ ವಿಶ್ವದಲ್ಲೇ ನಾಲ್ಕನೇ ಅತಿದೊಡ್ಡ ರೈಲ್ವೇ ಸಂಪರ್ಕಜಾಲವೆಂದು ಹೆಸರಾಗಿದೆ. 64 ಸಾವಿರ ಕಿಲೋಮೀಟರ್ ಉದ್ದದ ರೈಲು ಮಾರ್ಗ, 7 ಸಾವಿರಕ್ಕೂ ಹೆಚ್ಚು ನಿಲ್ದಾಣಗಳನ್ನು ಹೊಂದಿರುವ ಇದು ಅಮೆರಿಕ, ರಷ್ಯಾ ಮತ್ತು ಚೀನಾಗಳ ನಂತರದ ಸ್ಥಾನದಲ್ಲಿದೆ. ಭಾರತೀಯ ರೈಲುಗಳು ಪ್ರತಿದಿನ 2.5 ಕೋಟಿ ಜನರನ್ನು ಮತ್ತು 25 ಲಕ್ಷ ಟನ್ ಸರಕನ್ನು ದೇಶದ ಉದ್ದಗಲಕ್ಕೂ ಸಾಗಿಸುತ್ತವೆ. ಸುಮಾರು 16 ಲಕ್ಷ ಜನರಿಗೆ ಉದ್ಯೋಗ ಒದಗಿಸಿರುವ ಭಾರತೀಯ ರೈಲ್ವೆಯಲ್ಲಿ 60 ಸಾವಿರ ಬೋಗಿಗಳಿವೆ.

ಕರ್ನಾಟಕದ ಮೊದಲ ರೈಲು ಓಡಿದ್ದು ಬೆಂಗಳೂರಿನಿಂದ ಆಗಿನ ಮದ್ರಾಸಿಗೆ. ಅದು 1864ರಲ್ಲಿ. ಈಗ ಕೊಡಗು ಒಂದನ್ನು ಬಿಟ್ಟು ಉಳಿದೆಲ್ಲ ಜಿಲ್ಲೆಗಳಲ್ಲಿ ರೈಲು ಮಾರ್ಗಗಳಿವೆ. ಹೆಸರಾಂತ ಇಂಜಿನಿಯರ್ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗಿದ್ದ 6 ವರ್ಷಗಳ ಅವಧಿಯಲ್ಲಿ ಸಾಕಷ್ಟು ರೈಲುಮಾರ್ಗಗಳನ್ನು ನಿರ್ಮಿಸಿದ್ದರು. ಆನಂತರದ ಇಷ್ಟು ವರ್ಷಗಳಲ್ಲೂ ಅದಕ್ಕಿಂತ ಹೆಚ್ಚು ಉದ್ದದ ಹೊಸ ರೈಲುಮಾರ್ಗಗಳು ರಾಜ್ಯದಲ್ಲಿ ನಿರ್ಮಾಣಗೊಂಡಿಲ್ಲ ಎಂದರೆ ಅವರ ಕೊಡುಗೆ ಅರ್ಥವಾದೀತು.



# ಅಪ್ರತಿಮ ವಿಜ್ಞಾನಿ ಸುಬ್ರಹ್ಮಣ್ಯ ಚಂದ್ರಶೇಖರ್

ಕೆಲವು ಸಂಚಿಕೆಗಳ ಹಿಂದೆ ಬೆಳಕಿನ ಪರಿಣಾಮ ಕಂಡುಹಿಡಿದ ಖ್ಯಾತ ವಿಜ್ಞಾನಿ ಸಿ ವಿ ರಾಮನ್ ಬಗ್ಗೆ ಓದಿದ್ದೀರಲ್ಲ? ಈಗ ರಾಮನ್‌ರ ಅಣ್ಣನ ಮಗ, ಖಗೋಳ ಶಾಸ್ತ್ರ ವಿಜ್ಞಾನಿ ಶ್ರೀ ಸುಬ್ರಹ್ಮಣ್ಯ ಚಂದ್ರಶೇಖರ್ ಬಗ್ಗೆ ತಿಳಿಯೋಣ ಬನ್ನಿ.

ಚಂದ್ರಶೇಖರ್ 1933ರಲ್ಲಿ ಖಗೋಳಶಾಸ್ತ್ರ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದರು. ಖಗೋಳಶಾಸ್ತ್ರವನ್ನು ಭೌತಶಾಸ್ತ್ರದ ಒಂದು ಭಾಗವೆಂದು ನೊಬೆಲ್ ಸಂಸ್ಥೆ ಪರಿಗಣಿಸದ ಕಾರಣ ಈ ಸಾಧನೆಗೆ ನೊಬೆಲ್ ಪಾರಿತೋಷಕ ಪಡೆಯಲು ಚಂದ್ರಶೇಖರ್ 50 ವರ್ಷ ಕಾಯಬೇಕಾಯಿತು.

ಲಾಹೋರ್‌ನಲ್ಲಿ ಚಂದ್ರಶೇಖರ್ ಹುಟ್ಟಿದ್ದು 1910ರ ಅಕ್ಟೋಬರ್ 19ರಂದು. ಆಶ್ಚರ್ಯಕರ ಸಂಗತಿಯೆಂದರೆ ಅವರಿಗೆ ನೊಬೆಲ್ ಬಹುಮಾನ ಸಂದಿದ್ದು 1983ರ ಅಕ್ಟೋಬರ್ 19ರಂದು.

ಸುಮಾರು 50 ವರ್ಷ ಅಮೇರಿಕಾದಲ್ಲಿದ್ದು, ಅಲ್ಲಿ ಭೌತಶಾಸ್ತ್ರ ಮತ್ತು ಖಗೋಳಶಾಸ್ತ್ರ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ್ದಕ್ಕೆ ಅಮೆರಿಕಾ ಸರ್ಕಾರ ತನ್ನ ಸೌರ ವೀಕ್ಷಣಾಲಯಕ್ಕೆ 'ಚಂದ್ರ' ಎಂದು ಹೆಸರಿಟ್ಟಿತು.

ಅದು ಅಮೆರಿಕ ಒಬ್ಬ ವಿಜ್ಞಾನಿಗೆ ತೋರಿಸಿದ ಅತ್ಯುನ್ನತ ಗೌರವ.

# ಗುಬ್ಬಿಗೊಂದು ಗೂಡು



ದಿನಾಂಕ 20.03.11 ಅನ್ನು ವಿಶ್ವದಾದ್ಯಂತ ಗುಬ್ಬಚ್ಚಿಗಳ ದಿನವಾಗಿ ಆಚರಿಸಲಾಯಿತು. ಪರಿಸರದ ಆರೋಗ್ಯ ಸೂಚಕವಾಗಿರುವ ಗುಬ್ಬಚ್ಚಿಗಳ ಸಂಖ್ಯೆ ದಿನೇ ದಿನೇ ನಶಿಸುತ್ತಿರುವದು ಆತಂಕದ ವಿಷಯ. ಅವುಗಳ ರಕ್ಷಣೆ, ಪೋಷಣೆಯತ್ತ ಗಮನ ಸೆಳೆಯುವುದು ಈ ಆಚರಣೆಯ ಉದ್ದೇಶ. ವಾಹನಗಳಲ್ಲಿ ಸೀಸ ಮಿಶ್ರಿತ ಪೆಟ್ರೋಲ್ ಬಳಕೆಯಿಂದ ವಾತಾವರಣದಲ್ಲಿ ಮಿಥೈಲ್ ನೈಟ್ರೇಟ್ ಸೇರಿಕೆ ಗುಬ್ಬಚ್ಚಿಗಳ ನಶಿಸುವಿಕೆಗೆ ಒಂದು ಕಾರಣ. ಗುಬ್ಬಚ್ಚಿಗಳ ಆಹಾರವಾದ ಕ್ರಿಮಿಕೀಟಗಳು ವ್ಯಾಪಕ ಕ್ರಿಮಿನಾಶಕಗಳ ಬಳಕೆಯಿಂದ ವಿಷಯುಕ್ತವಾಗಿರುವುದು ಇನ್ನೊಂದು ಕಾರಣ. ಸಾವಯವ ಮಾದರಿಯಲ್ಲಿ ಅನೇಕ ಕೀಟಗಳನ್ನು ನಿಯಂತ್ರಿಸುವ ಗುಬ್ಬಚ್ಚಿಗಳು ಈ ಕೀಟಗಳ ಸೇವನೆಯಿಂದ ಘಾಸಿಗೊಳ್ಳುತ್ತಿವೆ. ಗುಬ್ಬಚ್ಚಿಗಳನ್ನು ಸಂರಕ್ಷಿಸಲು ಅವುಗಳಿಗೆ ಎತ್ತರದ ಜಾಗದಲ್ಲಿ ಕುಡಿಯುವ ನೀರಿಡಿ ಹಾಗೂ ಗುಬ್ಬಚ್ಚಿ ಗೂಡು ಕಟ್ಟಿಕೊಳ್ಳಲು ಸರಳ ಗುಬ್ಬಚ್ಚಿ ಮನೆ ಮಾಡಿ ಎತ್ತರದ ಸ್ಥಳದಲ್ಲಿ ತೂಗುಬಿಡಿ. ಸಾಧ್ಯವಾದಲ್ಲಿ ಅವುಗಳಿಗೆ ಧಾನ್ಯಗಳು ಹಾಗೂ ಕಾಳು ಕಡಿ ನೀಡಿ. ಮಲ್ಲಿಗೆ, ದಾಸವಾಳದಂಥ ಪೊದೆ ಜಾತಿಯ ಗಿಡಗಳನ್ನು ಮನೆ ಮತ್ತು ಶಾಲೆಯ ಮುಂದೆ ಅಥವಾ ಕೈತೋಟಗಳಲ್ಲಿ ಬೆಳೆಸಿ.

# ಇ–ಪುಸ್ತಕ




ಪುಸ್ತಕಗಳು ಒಳ್ಳೆಯ ಮಿತ್ರರಿದ್ದಂತೆ. ಗ್ರಂಥಾಲಯಗಳಂತೂ ಮಾಹಿತಿಯ ಸಮುದ್ರಗಳು. ಆದರೆ ಎಲ್ಲ ಉತ್ತಮ ಪುಸ್ತಕಗಳು ಎಲ್ಲರಿಗೂ ಸಿಗುವುದಿಲ್ಲ; ಅಲ್ಲದೇ, ಒಳ್ಳೆಯ ಗ್ರಂಥಾಲಯಗಳಿಗೆ ಭೇಟಿ ನೀಡಲು ಎಲ್ಲರಿಗೂ ಸಾಧ್ಯವಾಗದು. ಗಣಕ ವಿಜ್ಞಾನಿಗಳು ಇದಕ್ಕೆ ಕಂಡುಹಿಡಿದಿರುವ ಪರಿಹಾರವೇ ಇ–ಪುಸ್ತಕ.

ಇಲೆಕ್ಟ್ರಾನಿಕ್ ರೂಪದಲ್ಲಿರುವ ಇವುಗಳನ್ನು ಗಣಕದಲ್ಲಿಯೇ ಓದಿಕೊಳ್ಳಬಹುದು. ಅಷ್ಟೇ ಅಲ್ಲ, ಇವನ್ನು ಓದಲಿಕ್ಕೆಂದೇ ತಯಾರಿಸಲಾಗಿರುವ ಉಪಕರಣಗಳೂ ಇವೆ. ಕೆಲ ಮೊಬೈಲ್ ದೂರವಾಣಿಗಳಲ್ಲೂ ಇ–ಪುಸ್ತಕಗಳನ್ನು ಓದುವುದು ಸಾಧ್ಯ. ಕೆಲವು ಇ–ಪುಸ್ತಕಗಳನ್ನು ಖರೀದಿಸಬೇಕು. ಆದರೆ ಅಂತರ ಜಾಲದಲ್ಲಿ ಸಾಕಷ್ಟು ಇ–ಪುಸ್ತಕಗಳು ಉಚಿತವಾಗಿಯೇ ಲಭ್ಯ ಇವೆ. ಪ್ರಾಜೆಕ್ಟ್ ಗುಟೆನ್‌ಬರ್ಗ್ ಎಂಬ ಯೋಜನೆಯ ತಾಣದಲ್ಲಿ (www.gutenberg.org) 33,000ಕ್ಕೂ ಹೆಚ್ಚಿನ ಇ–ಪುಸ್ತಕಗಳು ಲಭ್ಯ ಇವೆ. ಇವನ್ನು ನಿಮ್ಮ ಗಣಕಕ್ಕೆ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇಂತಹ ನೂರಾರು–ಸಾವಿರಾರು ಇ–ಪುಸ್ತಕಗಳನ್ನು ಒಟ್ಟುಗೂಡಿಸಿ ಅಂತರಜಾಲದಲ್ಲಿ ಡಿಜಿಟಲ್ ಗ್ರಂಥಾಲಯಗಳನ್ನೂ ರೂಪಿಸಲಾಗಿದೆ. ನಮ್ಮ ದೇಶದ ತಂತ್ರಜ್ಞರೇ ರೂಪಿಸಿರುವ 'ಡಿಜಿಟಲ್ ಲೈಬ್ರರಿ ಆಫ್ ಇಂಡಿಯಾ' ಇಂತಹ ಗ್ರಂಥಾಲಯಗಳಲ್ಲೊಂದು. ಐಐಟಿ, ಐಐಎಸ್‌ಸಿ ಮುಂತಾದ ಅನೇಕ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸಿದ್ಧವಾಗಿರುವ ಈ ಆನ್‌ಲೈನ್ ಗ್ರಂಥಾಲಯದಲ್ಲಿ ಸಾವಿರಾರು ಅಪೂರ್ವ ಪುಸ್ತಕಗಳನ್ನು ಉಚಿತವಾಗಿ ಓದಬಹುದು. ಇಲ್ಲಿ ಅನೇಕ ಕನ್ನಡ ಪುಸ್ತಕಗಳೂ ಇವೆ. ಇದು www.dli.ernet.in ಎಂಬ ವಿಳಾಸದಲ್ಲಿ ಲಭ್ಯವಿದೆ.

ಅಂದಹಾಗೆ ಇ–ಪುಸ್ತಕಗಳನ್ನು ಶೇಖರಿಸಿಡುವುದು ಕೂಡ ಬಹಳ ಸುಲಭ. ಉದಾಹರಣೆಗೆ: ಕನ್ನಡ ವಿಶ್ವಕೋಶದ 14 ಸಂಪುಟಗಳನ್ನು ಗ್ರಂಥಾಲಯದಲ್ಲಿ ಜೋಡಿಸಿಡಲು ಅರ್ಧ ಕಪಾಟು ಬೇಕಾಗುತ್ತದೆ; ಆದರೆ ಇದನ್ನೇ ನಾಲ್ಕೇ ಸಿ.ಡಿ.ಗಳಲ್ಲಿ ಹುದುಗಿಸಿಡಬಹುದು!

## ಕಣಜ–ಕನ್ನಡ ವಿಶ್ವಕೋಶ

ವಿಶ್ವಕೋಶಗಳು ಅಂತರಜಾಲದಲ್ಲೂ ಇವೆ. ವಿಕಿಪೀಡಿಯಾದಂತಹ ಮುಕ್ತ ವಿಶ್ವಕೋಶಗಳು ಉಚಿತವಾಗಿ ಲಭ್ಯವಿವೆ. ಕನ್ನಡ ಭಾಷೆಯಲ್ಲಿ ಅಪಾರ ಪ್ರಮಾಣದ ಮಾಹಿತಿ ಒದಗಿಸಲು ಹೊರಟಿರುವ 'ಕಣಜ' ವಿಶ್ವಕೋಶ ಕೂಡ ಇದೀಗ ಸಿದ್ಧವಾಗುತ್ತಿದೆ. ಮಾಹಿತಿಯನ್ನು ಉಚಿತವಾಗಿ ಒದಗಿಸಲಿರುವ ಕಣಜದಲ್ಲಿ ಹೆಸರಾಂತ ಲೇಖಕರ ಕೃತಿಗಳು ಕೂಡ ಲಭ್ಯವಾಗಲಿವೆ. www.kanaja.in ನೋಡಿ.

ಈ ಸಂಚಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ಬರೆದು ಕಳಿಸಿರಿ. ಉತ್ತಮ ಬರಹಕ್ಕೆ ಬಹುಮಾನವಿದೆ. ವಿಳಾಸ ಕೆಳಗಿದೆ.

ಅದಮ್ಯ ಚೇತನ
'ಅನ್ನಪೂರ್ಣ'
ಮಹಾನಗರಪಾಲಿಕೆ ಸಮುದಾಯ ಭವನ
ಗವಿಪುರ, ಬೆಂಗಳೂರು –19

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ
ಅದಮ್ಯ ಚೇತನ ಬೆಂಗಳೂರು
ಚಿಣ್ಣರ ಚೇತನ–ಶಾಲಾ ಮಕ್ಕಳ ಗೋಡೆ ಪತ್ರಿಕೆ. ಕರ್ನಾಟಕ ಸರ್ಕಾರ, ಸರ್ವಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ– ಇವರ ಸಹಭಾಗಿತ್ವದಲ್ಲಿ ಪ್ರಕಾಶಿಸಿದೆ.
© ಹಕ್ಕುಗಳನ್ನು ಕಾದಿರಿಸಲಾಗಿದೆ

ಸರ್ವ ಶಿಕ್ಷಣ ಅಭಿಯಾನ ಮಿಷನ್
ಬೆಂಗಳೂರು